

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಕಾಮಾತುರಾಣಾಂ ನ ಭಯಂ ನ ಲಜ್ಜಾ'....

ನಮ್ಮ ದೇಶದಲ್ಲಿರುವ ನೂರಾರು ನದಿಗಳು, ಜಲಾಶಯಗಳು, ಸರೋವರಗಳು, ಹಳ್ಳಕೊಳ್ಳಗಳು ಒಮ್ಮೆ ಮೈದುಂಬಿ ರೈತರ ಮುಖದಲ್ಲಿ ಮಂದಹಾಸ ಮೂಡುವಂತೆ ಮಾಡಿದರೆ, ಮತ್ತೊಮ್ಮೆ ಬತ್ತಿ ಭೂಮಿ ಬಿರುಕುಬಿಟ್ಟು ಚಿಂತೆಯ ಗೆರೆಗಳು ಮೂಡುವಂತೆ ಮಾಡುತ್ತವೆ. ಆದರೆ ಭಾರತದ ಮಹಾಕಾವ್ಯಗಳಾದ ವಾಲ್ಮೀಕಿಯ ರಾಮಾಯಣವಾಗಲೀ, ವ್ಯಾಸರ ಮಹಾಭಾರತವಾಗಲೀ ಎಂದೂ ಬತ್ತದ ಸಾಹಿತ್ಯ ರಸಗಂಗೆಯಾಗಿ ಜನಮಾನಸದಲ್ಲಿ ಸದಾ ಕಾಲ ತುಂಬಿ ಹರಿಯುತ್ತಾ ಬಂದಿವೆ! ಇವುಗಳಲ್ಲಿ ಬರುವ ಕಥಾಪ್ರಸಂಗಗಳು ಒಂದೆಡೆ ನಾಡಿನ ಜನರ ದೈನಂದಿನ ಸಂಭಾಷಣೆಯ ಆಕರಗಳಾಗಿ ಬದುಕಿಗೆ ಬೆಳಕಾಗಿದ್ದರೆ, ಮತ್ತೊಂದೆಡೆ ಕಾಲಕಾಲದಲ್ಲಿ ಉದಯಿಸಿ ಬಂದ ಕವಿವರೇಣ್ಯರ ಸಾಹಿತ್ಯ ಕೃಷಿಗೆ ಸ್ಫೂರ್ತಿಯ ಸೆಲೆಯಾಗಿ ಕಂಗೊಳಿಸುತ್ತಿವೆ. ಸಂಸ್ಕೃತದಲ್ಲಿರುವ ಈ ಮೇರುಕೃತಿಗಳಿಂದ ಪ್ರಭಾವಿತಗೊಂಡು ಪ್ರಾಂತೀಯ ಭಾಷೆಗಳಲ್ಲಿ ಮೈದಾಳಿದ ಪ್ರಮುಖ ಗ್ರಂಥಗಳಲ್ಲಿ ಹಿಂದಿಯಲ್ಲಿ ವಿರಚಿತವಾದ 16ನೆಯ ಶತಮಾನದ ತುಲಸೀದಾಸರ 'ರಾಮಚರಿತಮಾನಸ'ವೂ ಒಂದು. ಕನ್ನಡ ನಾಡಿನಲ್ಲಿ ಶಿವಶರಣರ ವಚನಗಳನ್ನು, ದಾಸರ ಪದಗಳನ್ನು ದಿನನಿತ್ಯದ ಬದುಕಿಗೆ ಮಾರ್ಗದರ್ಶಿಯಾಗಿ ಉದಾಹರಿಸಿದಂತೆ ಉತ್ತರಭಾರತೀಯರು ತುಲಸೀರಾಮಾಯಣದ 'ಚೌಪಾಯಿ'ಗಳನ್ನು ನಿತ್ಯಜೀವನದಲ್ಲಿ ಗಾದೆಮಾತುಗಳಂತೆ ನೀತಿವಾಕ್ಯಗಳಂತೆ ಉದಾಹರಿಸುತ್ತಾರೆ. ಕಲಿಯುಗದಲ್ಲಿ ವಾಲ್ಮೀಕಿಯೇ ತುಲಸೀದಾಸನಾಗಿ ಹುಟ್ಟಿಬಂದನೆಂದು ಉತ್ತರಭಾರತದಲ್ಲಿ ಒಂದು ಪ್ರತೀತಿ ಇದೆ.

ತುಲಸೀದಾಸರಾಗಲೀ, ಪುರಂದರದಾಸರಾಗಲೀ ತಮ್ಮ ಬದುಕಿನಲ್ಲಿ ಒಂದು ಹೊಸ ತಿರುವು ಪಡೆದದ್ದು ಯಾವುದೇ ಮಠದ ಸ್ವಾಮಿಗಳ ಉಪದೇಶದಿಂದ ಅಲ್ಲ; ತಮ್ಮ ತಮ್ಮ ಸಹಧರ್ಮಿಣಿಯರ ಸನ್ನಡತೆ ಮತ್ತು ವಿವೇಕದ ಮಾತುಗಳಿಂದ! ಇತಿಹಾಸದಲ್ಲಿ ಕೆಲವರು ಸ್ವಾಮಿಗಳು ಸಂನ್ಯಾಸವನ್ನು ತ್ಯಜಿಸಿ ಗೃಹಸ್ಥಧರ್ಮವನ್ನು ಸ್ವೀಕರಿಸುವಂತೆ - ನಂತರ ಪರಿತಪಿಸುವಂತೆ, ಪ್ರಲೋಭನೆ ಮಾಡಿದವರು ಅವಿವಾಹಿತ ಮಹಿಳೆಯರಾದರೆ, ಗೃಹಸ್ಥರಾದ ಗಂಡಂದಿರಿಗೆ ಸ್ವಾಮಿಗಳಾಗುವಂತೆ ಪ್ರೇರೇಪಿಸಿದವರು ಸಾಧ್ವಿಮಣಿಗಳಾದ ಅವರ ಮಡದಿಯರು. ಜಿಪುಣಾಗ್ರೇಸರನಾದ ಶೀನಪ್ಪನು ಪುರಂದರದಾಸರಾಗಿ ಪರಿವರ್ತನೆ ಹೊಂದಿದ್ದು ಧರ್ಮದುರಂಧರೆಯಾದ ಅವರ ಮಡದಿ ಸರಸ್ವತಿದೇವಿಯಿಂದ. ತಮ್ಮ ಬದುಕಿನಲ್ಲಾದ ಈ ತಿರುವಿಗೆ ತನ್ನ ಹೆಂಡತಿಯೇ ಕಾರಣ ಎಂಬ ಸಂಗತಿಯನ್ನು ಸ್ವತಃ ಪುರಂದರದಾಸರೇ ಹೀಗೆ ನೆನೆಸುತ್ತಾರೆ:

**ದಂಡಿಗೆ ಬೆತ್ತ ಹಿಡಿಯುವುದಕ್ಕೆ**
**ಮಂಡೆ ಮಾಚಿ ನಾಚುತ್ತಿದ್ದೆ**
**ಹೆಂಡತಿ ಸಂತತಿ ಸಾವಿರವಾಗಲಿ**
**ದಂಡಿಗೆ ಬೆತ್ತ ಹಿಡಿಸಿದಳಯ್ಯ!**

ಪುರಂದರದಾಸರಂತೆ ತುಲಸೀದಾಸರನ್ನು ಆಧ್ಯಾತ್ಮಿಕ ಜೀವನದ ದಾರಿಯಲ್ಲಿ ನಡೆಯಲು ಪ್ರೇರೇಪಿಸಿದವಳೆಂದರೆ ಅವರ ಮೋಹದ ಮಡದಿ 'ರತ್ನಾವಲೀ'. ತುಲಸೀದಾಸರಿಗೆ ತನ್ನ ಪತ್ನಿಯಲ್ಲಿ ತುಂಬಾ ಮೋಹ, ಪ್ರೀತಿ ಇತ್ತು. ಅವರಿಗೆ ಒಂದು ಕ್ಷಣವೂ ಪತ್ನಿಯನ್ನು ಬಿಟ್ಟಿರಲು ಆಗುತ್ತಿರಲಿಲ್ಲ.. ಒಂದು ದಿನ ಅವರ ಪತ್ನಿ ತವರೂರಿಗೆ ಹೋದಳು. ಅವಳ ವಿರಹವನ್ನು ಸಹಿಸಲು ತುಲಸೀದಾಸರಿಂದ ಸಾಧ್ಯವಾಗದೆ ಅವಳ ಬೆನ್ನ ಹಿಂದೆಯೇ ಹೊರಟರು. ದಾರಿ ಮಧ್ಯೆ ನದಿಯನ್ನು ದಾಟಬೇಕಾಗಿತ್ತು. ರಾತ್ರಿ ಹೊತ್ತು ಅಂಬಿಗ ಇದ್ದಿಲ್ಲ. ಮಂದ ಬೆಳಕಿನಲ್ಲಿ ಒಂದು ಮರದ ದಿಮ್ಮಿ ತೇಲಿಬರುವುದು ಕಾಣಿಸಿತು. ಅದನ್ನು ಹತ್ತಿಕೊಂಡು ನದಿಯ ಆಚೆ ದಡ ಸೇರಿದರು. ಆದರೆ ವಾಸ್ತವವಾಗಿ ಅದು ಮರದ ದಿಮ್ಮಿಯಾಗಿರದೆ ನೀರಿನಲ್ಲಿ ತೇಲಿ ಬಂದ ಸತ್ತ ಹೆಣವಾಗಿತ್ತು! ರಾತ್ರಿ ಬಹಳ ಹೊತ್ತಾಗಿತ್ತು. ಹೆಂಡತಿಯ ಮನೆಯ ಬಾಗಿಲು ತಟ್ಟದೆ ಕಳ್ಳತನದಲ್ಲಿ ಮನೆಯ ಮೇಲಿನ ಸೂರಿನಿಂದ ಇಳಿಬಿದ್ದ ಹಗ್ಗವನ್ನು

ಹಿಡಿದುಕೊಂಡು ಛಾವಣಿಯನ್ನು ಹತ್ತಿ ಮನೆಯೊಳಗೆ ಇಳಿದರು. ಆದರೆ ಅವರು ಹಿಡಿದು ಹತ್ತಿದ್ದು ಹಗ್ಗವಲ್ಲ, ಹಾವು! ಹೆಂಡತಿಗೆ ಅಚ್ಚರಿಯಾಯಿತು. ತನ್ನ ಹಿಂದೆಯೇ ಬಂದ ಗಂಡನನ್ನು ನೋಡಿ ಆಕೆಗೆ ನಾಚಿಕೆಯುಂಟಾಯಿತು. ಗಂಡನ ವಿಷಯಾಸಕ್ತಿಯನ್ನು ಕಂಡು ಅಷ್ಟೇ ಜಿಗುಪ್ಸೆಯೂ ಉಂಟಾಯಿತು. ಕ್ಷೇಮಸಮಾಚಾರವನ್ನು ವಿಚಾರಿಸುವ ಬದಲು ಗಂಡನನ್ನು ತರಾಟೆಗೆ ತೆಗೆದುಕೊಂಡಳು:

**ಲಾಜ್ ನ ಲಾಗತ್ ಆಪ್‌ಕೋ, ದೌರೇ ಆಯೇಹೂ ಸಾಥ್ ।**
**ಧಿಕ್ ಧಿಕ್ ಐಸೇ ಪ್ರೇಮ್ ಕೋ, ಕಹಾ ಕಹೌಂ ಮೈಂ ನಾಥ್ ॥**
**ಅಸ್ಥಿ ಚರ್ಮಮಯ್ ದೇಹ್ ಮಯ್, ತಾಮೇಂ ಜೈಸೀ ಪ್ರೀತಿ।**
**ತೈಸೀ ಜೋ ಶ್ರೀ ರಾಮ್ ಮಹ್‌ಂ, ಹೋತೀ ನ ತೋ ಭವಭೀತಿ॥**

**(ನಾಚಿಕೆಯಾಗುವುದಿಲ್ಲವೇ ನಿನಗೆ**
**ನನ್ನ ಸೆರಗ ಹಿಂದೆ ಓಡಿ ಬರುವುದಕೆ?**
**ಧಿಕ್ಕಾರವಿರಲಿ ನಿನ್ನೀ ಪ್ರೀತಿಗೆ!**
**ಏನ ಹೇಳಲಿ ಲಜ್ಜೆಗೆಟ್ಟ ಗಂಡನೆ ನಿನಗೆ?**
**ಎಲುಬಿನ ಚರ್ಮದ ಗೇಹವೀ ದೇಹವು.**
**ಇದರ ಮೇಲಿನ ನಿನ್ನೀ ಪ್ರೀತಿಯು**
**ಆ ಶ್ರೀರಾಮನ ಮೇಲಿದ್ದರೆ ಅರಗಳಿಗೆಯು**
**ಹೋಗುತ್ತಿರಲಿಲ್ಲವೇ ಭವದ ಭೀತಿಯು?)**

ಹೆಂಡತಿಯ ಈ ಮೂದಲಿಕೆಯ ಮಾತುಗಳನ್ನು ಕೇಳಿ ತುಳಸೀದಾಸರು ತತ್ತರಿಸುತ್ತಾರೆ. ಬಂದ ದಾರಿಗೆ ಸುಂಕವಿಲ್ಲವೆಂಬಂತೆ ತಮ್ಮ ಬಗ್ಗೆ ಜಿಗುಪ್ಸೆಗೊಂಡು ಕಾಶಿಗೆ ಹೋಗುತ್ತಾರೆ. ನಂತರ ಪ್ರಯಾಗ ತಲುಪಿ ಕಾಷಾಯವಸ್ತ್ರ ಧರಿಸಿ ವಿರಾಗಿಯಾಗುತ್ತಾರೆ. ತನ್ನ ಇಷ್ಟದೇವರಾದ ಶ್ರೀರಾಮನನ್ನು ಹುಡುಕಿಕೊಂಡು ಅವನ ಲೀಲಾಕ್ಷೇತ್ರವಾದ ಅಯೋಧ್ಯೆಗೆ ತೆರಳುತ್ತಾರೆ. ಕೆಲವು ದಿನ ಅಲ್ಲಿದ್ದು ನಾಲ್ಕೂ ಕ್ಷೇತ್ರಗಳ - ಜಗನ್ನಾಥಪುರಿ, ರಾಮೇಶ್ವರಂ, ದ್ವಾರಕಾ ಮತ್ತು ಬದರಿಕಾಶ್ರಮ ಯಾತ್ರೆ ಕೈಗೊಳ್ಳಲು ನಿರ್ಧರಿಸುತ್ತಾರೆ. ಅಲ್ಲಿಂದ ಹಿಮಾಲಯದ ಮಾನಸಸರೋವರಕ್ಕೆ ಹೋಗುತ್ತಾರೆ. ಹೀಗೆ ಪರಿವ್ರಾಜಕರಾಗಿ ಅವರು ಇಡೀ ಭರತವರ್ಷವನ್ನು ಅಲೆದಾಡಿ ಸಮಾಜದ ದುರ್ಗತಿ, ಧಾರ್ಮಿಕ ವಿಚಾರಗಳ ತಿಳುವಳಿಕೆಯ ದುರವಸ್ಥೆಯನ್ನು ಕಂಡು ಮರುಗುತ್ತಾರೆ.

ತುಲಸೀದಾಸರ ಹೆಂಡತಿಯ ಮಾತುಗಳು ಅಕ್ಕಮಹಾದೇವಿಯ ಮಾತುಗಳನ್ನು ನೆನಪಿಗೆ ತಂದುಕೊಡುತ್ತವೆ. ಕಾಮಾಂಧತೆಯಿಂದ ಕೌಶಿಕ ತನ್ನ ಸೀರೆಯ ಸೆರಗನ್ನು ಹಿಡಿದು ಎಳೆದಾಗ ಅಕ್ಕಮಹಾದೇವಿ ಜಿಗುಪ್ಸೆಗೊಂಡು ಅವನನ್ನು ಹೀಗೆ ಎಚ್ಚರಿಸುತ್ತಾಳೆ:

**ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ**
**ಎಲುವಿನ ತಡಿಕೆ, ಕೀವಿನ ಹಡಿಕೆ**
**ಸುಡಲೀ ದೇಹವ; ಒಡಲುವಿಡಿದು ಕೆಡದಿರು**
**ಚೆನ್ನಮಲ್ಲಿಕಾರ್ಜುನನರಿ ಮರುಳೆ !**

ಅಕ್ಕಮಹಾದೇವಿಯು ಕೌಶಿಕನನ್ನು ಎಚ್ಚರಿಸುವ ಈ ಮಾತುಗಳಿಗೂ ತುಲಸೀದಾಸರ ಸಹಧರ್ಮಿಣಿ ರತ್ನಾವಲೀ ತನ್ನ ಗಂಡನನ್ನು ಎಚ್ಚರಿಸುವ ಮಾತುಗಳಿಗೂ ಎಷ್ಟೊಂದು ಸಾಮ್ಯವಿದೆ! ಕಾಲಮಾನದಲ್ಲಿ ವ್ಯತ್ಯಾಸವಿದ್ದರೂ, ಪ್ರಾಂತ್ಯ ಪ್ರದೇಶ ಭಾಷೆಗಳ ವ್ಯತ್ಯಾಸವಿದ್ದರೂ ಸಾತ್ವಿಕ ಸ್ವಭಾವದಿಂದ ಉದಯಿಸುವ ಅನುಭವ ತೀವ್ರತೆಯು ಒಂದೇ ತೆರನಾಗಿರುತ್ತದೆ. ಹೆಣ್ಣನ್ನು ಮಾಯೆಯೆಂದು ಹೀಗಳೆದ ಪುರುಷರ ಮನದೊಳಗಿರುವ ಮಾಯೆಯನ್ನು ಹೊಡೆದೋಡಿಸಿದ ಮಹಾಸಾಧ್ವಿಮಣಿಗಳು ಇವರು. ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ 'ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ' ಎಂದ ಅಲ್ಲಮನ ಬೋಧೆ ಇದರ ಹಿಂದೆ ಅಡಗಿದೆ. 'ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು' ಎನ್ನುತ್ತಾರೆ ದೇವರ ದಾಸಿಮಯ್ಯ. ಅಂತಹ 'ಬೆಕ್ಕುಗಳು' ಈಗ ಎಷ್ಟೋ ಮಠಗಳ ಸ್ವಾಮಿಗಳಾಗಿ ವಿಜೃಂಭಿಸುತ್ತಿವೆ!

ನಿತ್ಯವೂ ದಿನಪತ್ರಿಕೆಗಳಲ್ಲಿ ಹೊರಜಗತ್ತಿನ ಸುದ್ದಿಗಳನ್ನು ಓದಿದರೆ, ಪ್ರತಿ ಸೋಮವಾರ ಸಿರಿಗೆರೆಯಲ್ಲಿ ನಮ್ಮ ಸಮ್ಮುಖದಲ್ಲಿ ನಡೆಯುವ 'ಸದ್ಧರ್ಮನ್ಯಾಯಪೀಠ'ದಲ್ಲಿ ಮನುಷ್ಯರ ಒಳಜಗತ್ತನ್ನು ನೋಡುತ್ತೇವೆ. ಒಮ್ಮೆ ಸುಮಾರು 80 ವರ್ಷದ ಹಳ್ಳಿಯ ವೃದ್ಧ ಅರ್ಜಿದಾರನಾಗಿ ನಮ್ಮ ಮುಂದೆ ಹಾಜರಾದ. ಆತ ತನ್ನ ಗ್ರಾಮದ ವ್ಯಕ್ತಿಯೊಬ್ಬನಿಗೆ 25 ಸಾವಿರ ರೂ. ಗಳನ್ನು ಸಾಲವಾಗಿ ಕೊಟ್ಟಿದ್ದ. ಸಾಲ ಕೊಟ್ಟಿದ್ದಕ್ಕೆ ಪುರಾವೆಯಾಗಿ ಅವನಿಂದ

ಬರೆಸಿಕೊಂಡಿದ್ದ ಪ್ರಾಂಸರಿ ನೋಟನ್ನು ಹಾಜರುಪಡಿಸಿದ. ಪ್ರತಿವಾದಿಯು ಸಾಲ ಪಡೆದು ಐದಾರು ವರ್ಷಗಳಾಗಿದ್ದರೂ ಅರ್ಜಿದಾರನಿಗೆ ಅಸಲನ್ನಾಗಲೀ ಅದರ ಮೇಲಿನ ಬಡ್ಡಿಯನ್ನಾಗಲೀ ಪಾವತಿಸಿರಲಿಲ್ಲ. ಬಡ್ಡಿದರ ಹಳ್ಳಿಲೆಕ್ಕದಲ್ಲಿ ಎರಡು ರೂ. ಮಾತ್ರ. ಇದು ಮೇಲ್ನೋಟಕ್ಕೆ ಮುಖ್ಯಮಂತ್ರಿ ಯಡೆಯೂರಪ್ಪನವರು ರೈತರಿಗೆ ನಿಗದಿಪಡಿಸಿರುವ ಸುಲಭ ಬಡ್ಡಿದರಕ್ಕಿಂತ ಅರ್ಧದಷ್ಟು ಕಡಿಮೆ. ಆದರೆ ಬ್ಯಾಂಕ್ ಲೆಕ್ಕಾಚಾರದ ಪ್ರಕಾರ ಶೇ. 24 ರೂ. ಆಗುತ್ತದೆ. ಹಳ್ಳಿಗರ ಹಣಕಾಸಿನ ಲೇವಾದೇವಿಯಲ್ಲಿ ಬಡ್ಡಿದರ 2 ರೂ. ನಿಂದ 5 ರೂ. ಅಂದರೆ ಶೇ. 60 ರೂ. ವರೆಗೂ ಏರುತ್ತದೆ. ಹೀಗಾಗಿ ಬಡ್ಡಿ ಆಸೆಯಿಂದ ಹಳ್ಳಿಗರು ಖಾಸಗಿ ಸಾಲ ಕೊಡುತ್ತಾರೆ. ಕೊನೆಗೆ ಕೊಟ್ಟ ಗಂಟನ್ನು ಕಳೆದುಕೊಳ್ಳುತ್ತಾರೆ. ಕೇಳಿದರೆ 'ಕೊಡೋದಿಲ್ಲ ಹೋಗೋ, ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ' ಎಂದು ಸಾಲಗಾರರು ದಬಾಯಿಸುತ್ತಾರೆ. ಅದಕ್ಕೇ ಅಲ್ಲವೇ ಹಿರಿಯರು ಗಾದೆ ಮಾತು ಹೇಳಿದ್ದು: 'ಕೊಟ್ಟೋನು ಕೋಡಂಗಿ, ಇಸ್ಕೊಂಡೋನು ಈರಭದ್ರ!' ಪಾಪ, ಅರ್ಜಿದಾರನಾದ ಹಳ್ಳಿಯ ವೃದ್ಧ ತನ್ನ ಜೀವನಕ್ಕೆ ಆಸರೆಯಾಗಲೆಂದು ಸಾಲ ಕೊಟ್ಟು ಕೈಸುಟ್ಟುಕೊಂಡಿದ್ದಾನೆ ಎಂದು ಅವನ ಮೇಲೆ ಅನುಕಂಪೆ ಮೂಡಿತು. ಆದರೂ ವಿಚಾರಣೆಯ ಹಂತದಲ್ಲಿ ಅವಸರದ ನಿರ್ಣಯಕ್ಕೆ ಬರುವುದು ಉಚಿತವಲ್ಲ. ಎದುರಾಳಿಯ ಉತ್ತರವನ್ನು ತೆರೆದ ಮನಸ್ಸಿನಿಂದ ಕೇಳಿಯೇ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು. ನೋಟೀಸ್ ಜಾರಿ ಮಾಡಿದೆವು. ವಿಚಾರಣೆಯ ದಿನ ಸುಮಾರು 35 ವರ್ಷ ವಯಸ್ಸಿನ ಪ್ರತಿವಾದಿ ಹಾಜರಾದ.

**'ಅರ್ಜಿದಾರನಿಂದ ನೀನು 25 ಸಾವಿರ ರೂ. ಗಳನ್ನು ಸಾಲವಾಗಿ ಪಡೆದದ್ದು ನಿಜವೇ?'**

**'ಹೌದು, ನಿಜ'**

**'ಅಸಲನ್ನಾಗಲೀ, ಬಡ್ಡಿಯನ್ನಾಗಲೀ ಕಳೆದ ಐದಾರು ವರ್ಷಗಳಿಂದ ನೀನು ಇವನಿಗೆ ಕೊಟ್ಟಿಲ್ಲವಂತೆ, ನಿಜವೇ?'**

**'ನಿಜ, ಬುದ್ದಿ'**

**'ಏಕೆ, ಕೊಟ್ಟಿಲ್ಲ?'**

**'ಕೊಟ್ಟ ಸಾಲ ಕೊಡಬಾರದೆಂಬ ಕೆಟ್ಟ ಆಲೋಚನೆ ತಮ್ಮ ಪಾದಸಾಕ್ಷಿಯಾಗಿ ನನ್ನ ಮನಸ್ಸಿನಲ್ಲಿಲ್ಲ. ಆದರೆ ಈ ಮುದುಕ ನನ್ನ ಹೆಂಡತಿಗೆ ಪ್ರೇಮಪತ್ರ ಬರೆದಿದ್ದಾನೆ. ನನ್ನ ಹೆಂಡತಿ ದನಕಾಯಲು ಹೋದಾಗ ಮಾನಭಂಗ ಮಾಡುವ ಪ್ರಯತ್ನವನ್ನೂ ಮಾಡಿದ್ಧಾನೆ.'**

**'ಏನು, ಏನು ಹೇಳುತ್ತಿದ್ದೀಯಾ?'**

ಪ್ರತಿವಾದಿ ತನ್ನ ಜೇಬಿನಿಂದ ಅರ್ಜಿದಾರ ತನ್ನ ಹೆಂಡತಿಗೆ ಬರೆದಿದ್ದ ಪ್ರೇಮಪತ್ರವನ್ನು ಹೊರತೆಗೆದು ನಮ್ಮ ಮುಂದೆ ಹಾಜರುಪಡಿಸಿದ. ಮಾನಭಂಗ ಮಾಡಲು ವಿಫಲಪ್ರಯತ್ನ ಮಾಡಿದ್ದಕ್ಕೆ ಸಾಕ್ಷಿದಾರರನ್ನು ಹಾಜರು ಪಡಿಸುವುದಾಗಿ ಹೇಳಿದ. ಅರ್ಜಿದಾರ ಅವನ ಹೆಂಡತಿಗೆ ಬರೆದಿದ್ದ ಆ ಪತ್ರದಲ್ಲಿನ ಒಕ್ಕಣಿಕೆ ಹೀಗಿತ್ತು:

**"ನಾನು ನಿನಗೆ ಗೃಹಪ್ರವೇಶ ಮಾಡಿದ ದಿನದಂದು ಮುಯ್ಯಿಮಾಡಬೇಕೆಂದು ಬಹಳ ದಿನದಿಂದ ನಿನ್ನ ಮೇಲೆ ಆಸೆ ಇಟ್ಟುಕೊಂಡಿದ್ದೆನು. ನಾನು ನಿನಗೆ ಏನನ್ನು ಕೊಡಿಸಬೇಕೆಂದರೆ ಕಿವಿಸಟ್ಟು, ಕೊರಳಿಗೆ ಗುಂಡು, ಟಿವಿ ಮತ್ತು ಎಮ್ಮೆ ಈ ನಾಲ್ಕು ವಸ್ತುಗಳಲ್ಲಿ ನಿನಗೆ ಯಾವುದು ಇಷ್ಟ ಎಂದು ಹೇಳಿದರೆ ಅದನ್ನು ಕೊಡಿಸುತ್ತೇನೆ. ನಾನು ನಿನ್ನನ್ನು ಕೇಳಿದ ಈಚೆಗೆ ಮನೆ ಕ್ರಯಹಾಕಿಸಿಕೊಂಡ ಬಾಬ್ತು 25 ಸಾವಿರ ರೂ.ಗಳನ್ನು ಕೊಡು ಎಂದು ಕೇಳಿದಾಗ ಅದಕ್ಕೆ ನಾನು ಮಾತುಕೊಟ್ಟು ಅದರಂತೆ ಹಣ ಕೊಟ್ಟಿದ್ದೇನೆ. ಖಂಡಿತವಾಗಿ ನಾನು ನಿನ್ನ ಮೇಲೆ ಪ್ರೀತಿಪ್ರೇಮ ಇಟ್ಟಿದ್ದೇನೆ ಮತ್ತು ನಿನ್ನನ್ನು ಪ್ರೀತಿ ಮಾಡಬೇಕೆಂದು ಬಹಳ ಆಸೆ ಇಟ್ಟುಕೊಂಡಿದ್ದೇನೆ. ನೀನು ದಾವಣಗೆರೆಗೆ ಆದರೂ ಬರಬೇಕು, ಇಲ್ಲ ಎಂದರೆ ನಿನ್ನ ಗಂಡ ಇಲ್ಲದಾಗ ಮನೆಗೆ ಆದರೂ ಬರುತ್ತೇನೆ. ಖಂಡಿತಾ ಮರೆಯಬೇಡ. ಮತ್ತು ಇಲ್ಲಿ ಏನಾದರೂ ತೆಗೆದುಕೊಳ್ಳುತ್ತೇನೆ ಅಂದರೆ ಮೂರು ಸಾವಿರ ರೂ. ಗಳನ್ನು ಕೈಲಿ ಕೊಡುತ್ತೇನೆ. ಮತ್ತು ಮನೆಯ ಪಕ್ಕದ ಸೈಟನ್ನು ನನ್ನ ಹಣದಲ್ಲೇ ಕೊಡಿಸುತ್ತೇನೆ. ತಕ್ಷಣವೇ ಯಾವುದಕ್ಕೂ ಕಾಗದ ಬರೆ. ಪತ್ರ ಓದಿಕೊಂಡು ಯಾರಿಗೂ ತೋರಿಸಬೇಡ. ಓದಿದ ಮೇಲೆ ಈ ಪತ್ರವನ್ನು ಸುಟ್ಟುಹಾಕು. ಏನೂ ಬೇಜಾರು ತಿಳಿದುಕೊಳ್ಳಬೇಡ. ನಾನು ನಿನ್ನ ಮಾತಿಗೆ ತಪ್ಪಿಲ್ಲ. ನೀನೂ ಸಹ ನನ್ನ ಮಾತಿನಂತೆ ನಡೆದುಕೋ. ನಿನಗೆ ಮುಂದೆ ಅನುಕೂಲವಿದೆ. ಇಂತೀ ಆಶೀರ್ವಾದಗಳು (ಸಹಿ)."**

ಹದಿಹರೆಯದ ಕಾಲೇಜಿನ ಹುಡುಗ ಹುಡುಗಿಯರು ಪ್ರೇಮಪತ್ರ ಬರೆಯುವುದನ್ನು ಕೇಳಿದ್ದೀರಿ. ಆದರೆ ಒಬ್ಬ ಮುದುಕನು ತನ್ನ ಮೊಮ್ಮೊಗಳ ವಯಸ್ಸಿನ ಅದೂ ಮದುವೆಯಾದ ಯುವ ಮಹಿಳೆಗೆ ಪ್ರೇಮಪತ್ರ ಬರೆದ ಸುದ್ದಿಯನ್ನು ಎಲ್ಲಿಯೂ ಕೇಳಿರಲಾರಿರಿ. ಈ ಪತ್ರ ಬರೆದದ್ದು ನಿಜವೇ ಎಂದು ಅರ್ಜಿದಾರನಾದ ಆ ಮುದುಕನನ್ನು ಕೇಳಿದೆವು. ಹೌದೆಂದು ಒಪ್ಪಿಕೊಂಡ. ಪತ್ರವನ್ನು ಬಹಿರಂಗವಾಗಿ ಓದಿಹೇಳಿದೆವು. ನ್ಯಾಯಪೀಠದ ಮುಂದಿದ್ದ ನೂರಾರು ಜನರು ಗಹಗಹಿಸಿ ನಗತೊಡಗಿದರು. ಆ ಮುದುಕ ಸಾಲ ಕೊಟ್ಟಿದ್ದು ಬಡ್ಡಿಯ ಮೇಲಿನ ಆಸೆಯಿಂದಲ್ಲ, ಪ್ರತಿವಾದಿಯ ಹೆಂಡತಿಯ ಮೇಲಿನ ಆಸೆಯಿಂದ! 'ನಿನ್ನ ಮೊಮ್ಮಗಳ ವಯಸ್ಸಿನವಳಾದ ಮಹಿಳೆಗೆ ಹೀಗೆ ಪ್ರೇಮಪತ್ರ ಬರೆಯಲು ನಿನಗೆ ನಾಚಿಕೆಯಾಗುವುದಿಲ್ಲವೇ?' ಎಂದು ಎಲ್ಲರ ಎದುರು ಆ ಮುದುಕನಿಗೆ

ಛೀಮಾರಿ ಹಾಕಿದೆವು. ಅವನಿಂದ ಪಡೆದ 25 ಸಾವಿರ ರೂ. ಗಳ ಸಾಲವನ್ನು ಹಿಂದಿರುಗಿಸುವುದು ಬೇಕಿಲ್ಲವೆಂದು ತೀರ್ಪು ನೀಡಿ, ಆ ಹಣವನ್ನು ಅವನಿಗೆ ವಿಧಿಸಿದ ದಂಡವೆಂದು ತಿಳಿದು ನೀನೇ ಇಟ್ಟುಕೋ, ಕೊಡಬೇಡ ಎಂದು ಪ್ರತಿವಾದಿಗೆ ಹೇಳಿ ಅರ್ಜಿಯನ್ನು ವಜಾಗೊಳಿಸಿದೆವು. ಶಂಕರಾಚಾರ್ಯರ 'ಭಜ ಗೋವಿಂದಂ' ನೆನಪಾಯಿತು:

**ಅಂಗಂ ಗಲಿತಂ ಪಲಿತಂ ಮುಂಡಂ**
**ದಶನವಿಹೀನಂ ಜಾತಂ ತುಂಡಂ ।**
**ವೃದ್ಧೋ ಯಾತಿ ಗೃಹೀತ್ವಾ ದಂಡಂ**
**ತದಪಿ ನ ಮುಂಚ್ಯತ್ಯಾಶಾಪಿಂಡಂ ॥ (ಭಜಗೋವಿಂದಂ)**

**(ಆವರಿಸಿತು ಮುಪ್ಪು ಶರೀರಕೆ**
**ಬಂದವು ನೆರೆಗೂದಲು ತಲೆಗೆ**

**ಉದುರಿದುವು ಹಲ್ಲು ಬಾಯೊಳಗೆ**
**ಸಂದಿತು ಊರುಗೋಲು ಕೈಯೊಳಗೆ**

**ನಡುಬಾಗಿ ನಡೆದನಜ್ಜ ಮೆಲ್ಲ ಮೆಲ್ಲಗೆ**
**ಆದರೂ ಬರಲಿಲ್ಲ ಬುದ್ಧಿ ಆಶಾಪಿಂಡಕೆ!)**

ಶಂಕರಾಚಾರ್ಯರ ಈ ಮಾತುಗಳು ಮೇಲ್ಕಂಡ ಮುದುಕನ ಪ್ರೇಮಪತ್ರ ಪ್ರಕರಣವನ್ನು ಕುರಿತೇ ಹೇಳಿದಂತಿವೆ. ಅವರು ಹೇಳಿದ್ದು 8ನೆಯ ಶತಮಾನದಲ್ಲಿ. ಈ ಪ್ರಕರಣ ಘಟಿಸಿದ್ದು 21ನೆಯ ಶತಮಾನದಲ್ಲಿ. ಆದರೆ ಮನುಷ್ಯನ ಮನಸ್ಸಿನ ದೌರ್ಬಲ್ಯಗಳು ಎಲ್ಲ ಕಾಲಕ್ಕೂ ಒಂದೇ ಅಲ್ಲವೇ?

**19.11.2008**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑